# ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿಮಿಟೆಡ್

ಕೇಂದ್ರ ಕಛೇರಿ, ರಾಯರಪೇಟೆ, ಶಿರಸಿ – 581 401 (ಉ.ಕ)

ದೂರವಾಣಿ ಸಂಖ್ಯೆ: 08384-226643, ಮೊಬೈಲ್ ಸಂ: 98807 65343

## ನೇಮಕಾತಿ ಪ್ರಕಟಣೆ

ನಮ್ಮ ಬ್ಯಾಂಕಿನಲ್ಲಿ ಖಾಲಿ ಇರುವ ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಹುದ್ದೆಯ ಪದನಾಮ | ಒಟ್ಟೂ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ವೇತನ ಶ್ರೇಣಿ |
|---|---|---|---|
| ಫ್ರಂಟ ಡೆಸ್ಕ ಅಸೋಸಿಯೇಟ (Front Desk Associate) / ಕಸ್ಟಮರ್ ರಿಲೇಷನಷಿಪ ಅಸೋಸಿಯೇಟ (Customer Relationship Associate)<br><br>ಸದರಿ ಹುದ್ದೆಗಳು ಸಮನಾದ ಕೇಡರ್ ಹೊಂದಿರುತ್ತವೆ. | **30 (ಮೂವತ್ತು)** | ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಈ ಕೆಳಗಿನ ಯಾವುದೇ ಪದವಿಯನ್ನು ಹೊಂದಿರಬೇಕು. (ಪದವಿಯ ಎಲ್ಲಾ ವರ್ಷದ ಸರಾಸರಿ ಶೇಕಡಾ 50 ಮತ್ತು ಶೇಕಡಾ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು.)<br><br>**ಬಿ.ಕಾಮ್/ ಬಿ.ಬಿ.ಎ/ ಬಿ.ಬಿ.ಎಮ್/ ಬಿ.ಇ/ ಬಿ.ಸಿ.ಎ/ ಬಿ.ಎಸ್.ಸಿ*/ ಬಿ.ಎ.****<br><br>*ಬಿ.ಎಸ್.ಸಿ – ಗಣಿತ ಅಥವಾ ಸಂಖ್ಯಾಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಒಂದು ಐಚ್ಚಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.<br><br>**ಬಿ.ಎ – ಗಣಿತ, ಸಂಖ್ಯಾಶಾಸ್ತ್ರ ಅಥವಾ ಅರ್ಥಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಒಂದು ಐಚ್ಚಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು<br><br>ಎಂ.ಬಿ.ಎ ಅಥವಾ ಎಂ.ಕಾಂ ಅಥವಾ ಎಂ.ಸಿ.ಎ ಅಥವಾ ಗಣಿತ/ ಸಂಖ್ಯಾಶಾಸ್ತ್ರ/ ಅರ್ಥಶಾಸ್ತ್ರ / ಬ್ಯಾಂಕಿಂಗ್ / ಎಕೌಂಟನ್ಸಿ ವಿಷಯಗಳೊಂದಿಗೆ ತೇರ್ಗಡೆಯಾಗಿ, ಸ್ನಾತಕೋತ್ತರ ಪದವಿ (ಮಾಸ್ಟರ್ ಡಿಗ್ರಿ) ಹೊಂದಿದವರಿಗೆ ಹಾಗೂ ಡಿಪ್ಲೋಮಾ ಇನ್ ಬ್ಯಾಂಕಿಂಗ್/ ಡಿಪ್ಲೋಮಾ ಇನ್ ಕೋಒಪರೇಟಿವ್ ಬಿಸಿನೆಸ್ ಮ್ಯಾನೇಜ್ಮೆಂಟ್/ ಜೆ.ಎ.ಐ.ಐ.ಬಿ/ ಸಿ.ಎ.ಐ.ಐ.ಬಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. | ರೂ. 34100-800-35700-900-39300-1000-43300-1125-47800-1250-52800-1375-58300-1500-64300-1650-74200-1900-85600-2300-99400-2700-107500 ಹಾಗೂ ಕಾಲಕಾಲಕ್ಕೆ ಕರ್ನಾಟಕ ರಾಜ್ಯ ಸರಕಾರಿ ನೌಕರರಿಗೆ ಅನ್ವಯವಾಗುವ ದರದಲ್ಲಿ ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು. |
| ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ (Attender/ Peon / Security Guard)<br><br>ಸದರಿ ಹುದ್ದೆಗಳು ಸಮನಾದ ಕೇಡರ್ ಹೊಂದಿರುತ್ತವೆ. | **10 (ಹತ್ತು)** | ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. | 27000-650-29600-725-32500-800-35700-900-39300-1000-43300-1125-47800-1250-52800-1375-58300-1500-64300-1650-74200-1900-83700 ಹಾಗೂ ಕಾಲಕಾಲಕ್ಕೆ ಕರ್ನಾಟಕ ರಾಜ್ಯ ಸರಕಾರಿ ನೌಕರರಿಗೆ ಅನ್ವಯವಾಗುವ ದರದಲ್ಲಿ ತುಟ್ಟಿಭತ್ಯೆ ಹಾಗೂ ಇತರ ಭತ್ಯೆಗಳು. |

ನಿಬಂಧನೆಗಳು:

1. **ಅ) <u>ಫ್ರಂಟ ಡೆಸ್ಕ ಅಸೋಸಿಯೇಟ</u> <u>(Front Desk Associate) / ಕಸ್ಟಮರ್ ರಿಲೇಷನಷಿಪ ಅಸೋಸಿಯೇಟ (Customer Relationship Associate)</u> ಹುದ್ದೆಗೆ ಅರ್ಜಿ ಸಲ್ಲಿಸುವ** ಅಭ್ಯರ್ಥಿಗಳು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಓದುವ, ಬರೆಯುವ, ಮಾತನಾಡುವ ಹಾಗೂ ವ್ಯವಹಾರದ ಜ್ಞಾನ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಂಪ್ಯೂಟರ್ ಶಿಕ್ಷಣ ಹೊಂದಿರಬೇಕು.

   **ಬ) <u>ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ (Attender/ Peon / Security Guard)</u> ಹುದ್ದೆಗೆ ಅರ್ಜಿ ಸಲ್ಲಿಸುವ** ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.

2. **<u>ಈ ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳಿಗೆ ಅಭ್ಯರ್ಥಿಗಳ ವಯೋಮಿತಿ:</u>** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ಹಾಗೂ ಒಂದು ಬಾರಿಯ ಕ್ರಮವಾಗಿ, ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಿ ಕರ್ನಾಟಕ ಸರ್ಕಾರವು ಹೊರಡಿಸಿದ ಆದೇಶ ಸಂಖ್ಯೆ ಸಿಆಸುಇ 262 ಸೇನೆನಿ 2025 ಬೆಂಗಳೂರು, ದಿನಾಂಕ : 29.01.2026 ರನ್ವಯ ಈ ಕೆಳಕಂಡ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು:

| | | |
|---|---|---|
| 1. | ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ–1 ಕ್ಕೆ ಸೇರಿರುವ ಅಭ್ಯರ್ಥಿಗಳಿಗೆ | – ಗರಿಷ್ಟ 45 ವರ್ಷಗಳು |
| 2. | ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ (2ಎ, 2ಬಿ, 3ಎ, 3ಬಿ) | – ಗರಿಷ್ಟ 43 ವರ್ಷಗಳು |
| 3. | ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ | – ಗರಿಷ್ಟ 40 ವರ್ಷಗಳು |

3. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ–1 ಕ್ಕೆ ಸೇರಿರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಹಾಗೂ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು. ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಈ ಮೇಲ್ಕಾಣಿಸಿದ ನೇಮಕಾತಿ ಪ್ರಕಟಣೆಯ ದಿನಾಂಕದ ನಂತರ ಪಡೆದಿರುವ ಪ್ರಮಾಣ ಪತ್ರವನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಕಡ್ಡಾಯವಾಗಿ ಲಗತ್ತಿಸಬೇಕು.

4. ಈ ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳಿಗೆ_ಅರ್ಜಿ ಸಲ್ಲಿಸುವ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಸುವ ಮೂಲಕ ಆಯ್ಕೆ ಮಾಡಲಾಗುವುದು.

   **ಅ) ಫ್ರಂಟ ಡೆಸ್ಕ ಅಸೋಸಿಯೇಟ** (**Front Desk Associate**) / **ಕಸ್ಟಮರ್ ರಿಲೇಷನಷಿಪ ಅಸೋಸಿಯೇಟ** (**Customer Relationship Associate**) **ಹುದ್ದೆಗೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ 200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಈ ಪೈಕಿ ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲೀಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಕ್ಕೆ 50 ಅಂಕಗಳು ಮತ್ತು ಭಾರತ ಸಂವಿಧಾನಕ್ಕಾಗಿ 25 ಅಂಕಗಳು, ಬ್ಯಾಂಕಿನ ಉದ್ದೇಶಗಳು ಮತ್ತು ಕಾರ್ಯಚಟುವಟಿಕೆಗಳಿಗೆ 25 ಅಂಕಗಳು = ಒಟ್ಟೂ 200 ಅಂಕಗಳಿಗೆ ಬಹು ಆಯ್ಕೆಮಾದರಿಯ (Objective type Multiple choice) ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

   **ಬ) ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ** (**Attender/ Peon / Security Guard) ಹುದ್ದೆಗೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ 100 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಈ ಪೈಕಿ ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 50 ಅಂಕಗಳು = ಒಟ್ಟೂ 100 ಅಂಕಗಳಿಗೆ ಬಹು ಆಯ್ಕೆಮಾದರಿಯ (Objective type Multiple choice) ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

   ಈ ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳಿಗೆ_ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆಯುವ ಅಂಕಗಳನ್ನು ಶೇಕಡಾ 85 ಕ್ಕೆ ನಿಗದಿಪಡಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಮೌಖಿಕ ಸಂದರ್ಶನ ನಡೆಸಿ, ಆಯ್ಕೆ ಮಾಡಲಾಗುವುದು.

5. ಅರ್ಜಿಯನ್ನು ಸ್ವ– ಹಸ್ತಾಕ್ಷರದಲ್ಲಿ ಬರೆಯತಕ್ಕದ್ದು. ತಪ್ಪು ಹಾಗೂ ಅಪೂರ್ಣ ಮಾಹಿತಿ ನೀಡಿದ ಅರ್ಜಿಯನ್ನು ತಿರಸ್ಕರಿಸಲಾಗುವುದು.

6. ಎಸ್.ಎಸ್.ಎಲ್.ಸಿ / ಪಿ.ಯು.ಸಿ / ಪದವಿ / ಸ್ನಾತಕೋತ್ತರ ಪದವಿಯ ಎಲ್ಲಾ ವರ್ಷಗಳ / ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಯ ಸ್ವದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸಬೇಕು.

7. **<u>ಅರ್ಜಿ ಶುಲ್ಕ :–</u>** ರೂ.1000/– (ರೂಪಾಯಿ ಒಂದು ಸಾವಿರ ಮಾತ್ರ) ಅರ್ಜಿ ಶುಲ್ಕವನ್ನು **"Chief Executive Officer, The Sirsi Urban Sahakari Bank Ltd.,Sirsi"** ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮೂಲಕ ಪಾವತಿಸತಕ್ಕದ್ದು. ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ. ಈ ಮೇಲ್ಕಾಣಿಸಿದ ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸುವುದಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.

8. ಆಯ್ಕೆಯಾದ ಅಭ್ಯರ್ಥಿಗಳಿಗೆ ಕನಿಷ್ಠ 6 ತಿಂಗಳ ವರೆಗೆ ತರಬೇತಿ ಅವಧಿ (ಪ್ರೊಬೆಶನರಿ) ಇದ್ದು ಈ ಅವಧಿಯಲ್ಲಿ ವೇತನ ಶ್ರೇಣಿಯಲ್ಲಿನ ಕನಿಷ್ಟ ಮೂಲ ವೇತನ ಮಾತ್ರ ನೀಡಲಾಗುವುದು. ತರಬೇತಿ ಅವಧಿಯಲ್ಲಿ ಸೇವೆಯು ತೃಪ್ತಿಕರವಾಗದಿದ್ದಲ್ಲಿ ತರಬೇತಿ ಅವಧಿಯನ್ನು ವಿಸ್ತರಿಸುವ ಅಧಿಕಾರವು ಬ್ಯಾಂಕಿನ ಆಡಳಿತ ಮಂಡಳಿಗೆ ಇರುತ್ತದೆ.

9. ಬದಲಾದ ಕಾಯ್ದೆ ಮತ್ತು ನಿಯಮಗಳಿಗನುಗುಣವಾಗಿ ಹೆಚ್ಚಿನ ಷರತ್ತುಗಳನ್ನು ವಿಧಿಸುವ ಅಧಿಕಾರ ಬ್ಯಾಂಕಿನ ಸಿಬ್ಬಂದಿ ನೇಮಕಾತಿ ಸಮಿತಿಗೆ ಇರುತ್ತದೆ.

10. ಈ ಜಾಹಿರಾತನ್ನು ಬದಲಾಯಿಸುವ, ನೇಮಕಾತಿಯನ್ನು ಮುಂದೂಡುವ ಅಥವಾ ಅಗತ್ಯವಿದ್ದಲ್ಲಿ ರದ್ದು ಪಡಿಸುವ ಪೂರ್ಣ ಅಧಿಕಾರ ಆಡಳಿತ ಮಂಡಳಿಗೆ ಇರುತ್ತದೆ ಹಾಗೂ ಅಭ್ಯರ್ಥಿಯ ಆಯ್ಕೆಯ ಬಗ್ಗೆ ಬ್ಯಾಂಕಿನ ಸಿಬ್ಬಂದಿ ನೇಮಕಾತಿ ಸಮಿತಿ ನಿರ್ಣಯ ಅಂತಿಮವಾಗಿರುತ್ತದೆ.

ಬ್ಯಾಂಕಿನ ಅಧಿಕೃತ ಜಾಲತಾಣ "www.sirsiurbanbank.bank.in" ದ ಮೂಲಕ ಅರ್ಜಿ ಫಾರ್ಮುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸೂಕ್ತ ದಾಖಲಾತಿಗಳನ್ನು ಸ್ವದೃಢೀಕೃತ ಪ್ರತಿಗಳೊಂದಿಗೆ ಅರ್ಜಿಯನ್ನು **"ಮುಖ್ಯ ಕಾರ್ಯನಿರ್ವಹಣಾಧಿಕಾರಿ , ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿ., ಕೇಂದ್ರ ಕಛೇರಿ, ರಾಯರಪೇಟೆ, ಶಿರಸಿ – 581 401 (ಉ.ಕ)",** ಈ ವಿಳಾಸಕ್ಕೆ ಪ್ರಕಟಣೆಯ ದಿನಾಂಕದಿಂದ 21 ದಿನಗಳೊಳಗಾಗಿ ತಲುಪುವಂತೆ ಸಲ್ಲಿಸತಕ್ಕದ್ದು. ಭರ್ತಿ ಮಾಡಿದ ಅರ್ಜಿಗಳನ್ನು ಬ್ಯಾಂಕಿನ ಕೇಂದ್ರ ಕಛೇರಿಗೆ **ದಿನಾಂಕ 28–07–2026** ರ ಸಾಯಂಕಾಲ 5:00 ಗಂಟೆಯೊಳಗೆ ತಲುಪುವಂತೆ ಕಳುಹಿಸತಕ್ಕದ್ದು. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿದ್ದರೆ, ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಜೊತೆಗೆ **"Chief Executive Officer, The Sirsi Urban Sahakari Bank Ltd., Sirsi"** ಹೆಸರಿಗೆ ತೆಗೆದ ರೂ.1000–00 (ರೂಪಾಯಿ ಒಂದು ಸಾವಿರ ಮಾತ್ರ) ರ ಡಿಮಾಂಡ ಡ್ರಾಫ್ಟನ್ನು ಸಲ್ಲಿಸತಕ್ಕದ್ದು. ಒಂದೇ ಅಭ್ಯರ್ಥಿಯು ಈ ಮೇಲ್ಕಾಣಿಸಿದ ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸುವುದಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು, ಸೂಕ್ತ ಅರ್ಜಿ ಶುಲ್ಕದ ಜೊತೆಗೆ ಸಲ್ಲಿಸತಕ್ಕದ್ದು ಹಾಗೂ ಲಕೋಟೆಯ ಮೇಲೆ ಯಾವ ಹುದ್ದೆಗೆ ಅರ್ಜಿ ಸಲ್ಲಿಸುತ್ತಿರೋ ಆ ಹುದ್ದೆಯನ್ನು ಅಂದರೆ **ಫ್ರಂಟ ಡೆಸ್ಕ ಅಸೋಸಿಯೇಟ** (**Front Desk Associate**) / **ಕಸ್ಟಮರ್ ರಿಲೇಷನಷಿಪ ಅಸೋಸಿಯೇಟ**_(Customer Relationship Associate) ಅಥವಾ **ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ** (**Attender/ Peon / Security Guard)** ಹುದ್ದೆಗೆ ಅರ್ಜಿ" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಸ್ಥಳ : ಶಿರಸಿ
**ದಿನಾಂಕ: 07–07–2026**

ಸಿಬ್ಬಂದಿ ನೇಮಕಾತಿ ಸಮಿತಿ ಪರವಾಗಿ
ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿಮಿಟೆಡ್,
ಶಿರಸಿ (ಉ.ಕ)

**ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿಮಿಟೆಡ್., ಶಿರಸಿ (ಉ.ಕ)**

ದಿನಾಂಕ : **08-07-2026** ರ ದಿನಪತ್ರಿಕೆಗಳಲ್ಲಿ (ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಹಾಗೂ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳು) ಪ್ರಕಟಿಸಿದ 30 **ಫ್ರಂಟ ಡೆಸ್ಕ ಅಸೋಸಿಯೇಟ**_(**Front Desk Associate**) / **ಕಸ್ಟಮರ್ ರಿಲೇಷನಶಿಪ ಅಸೋಸಿಯೇಟ**_(Customer Relationship Associate) ಮತ್ತು 10 **ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ** (**Attender/ Peon / Security Guard)** ಹುದ್ದೆಗಳಿಗೆ ನೇಮಕಾತಿ ಕುರಿತಂತೆ ಅಭ್ಯರ್ಥಿಗಳು ಪಾಲಿಸಬೇಕಾದ ಮುಖ್ಯ ಸೂಚನೆಗಳು:

1. **ಅ) ಫ್ರಂಟ ಡೆಸ್ಕ ಅಸೋಸಿಯೇಟ (Front Desk Associate) / ಕಸ್ಟಮರ್ ರಿಲೇಷನಶಿಪ ಅಸೋಸಿಯೇಟ (Customer Relationship Associate) ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು:**

   ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಈ ಕೆಳಗಿನ ಯಾವುದೇ ಪದವಿಯನ್ನು ಹೊಂದಿರಬೇಕು. (ಪದವಿಯ ಎಲ್ಲಾ ವರ್ಷದ ಸರಾಸರಿ ಶೇಕಡಾ 50 ಮತ್ತು ಶೇಕಡಾ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರಬೇಕು.)

   **ಬಿ.ಕಾಮ್/ ಬಿ.ಬಿ.ಎ/ ಬಿ.ಬಿ.ಎಮ್/ ಬಿ.ಇ/ ಬಿ.ಸಿ.ಎ/ ಬಿ.ಎಸ್.ಸಿ*/ ಬಿ.ಎ.****

   *ಬಿ.ಎಸ್.ಸಿ – ಗಣಿತ ಅಥವಾ ಸಂಖ್ಯಾಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಒಂದು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.

   **ಬಿ.ಎ – ಗಣಿತ, ಸಂಖ್ಯಾಶಾಸ್ತ್ರ ಅಥವಾ ಅರ್ಥಶಾಸ್ತ್ರ ವಿಷಯವನ್ನು ಕಡ್ಡಾಯವಾಗಿ ಒಂದು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು

   ಎಂ.ಬಿ.ಎ ಅಥವಾ ಎಂ.ಕಾಂ ಅಥವಾ ಎಂ.ಸಿ.ಎ ಅಥವಾ ಗಣಿತ / ಸಂಖ್ಯಾಶಾಸ್ತ್ರ/ ಅರ್ಥಶಾಸ್ತ್ರ / ಬ್ಯಾಂಕಿಂಗ್ / ಎಕೌಂಟನ್ಸಿ ವಿಷಯಗಳೊಂದಿಗೆ ತೇರ್ಗಡೆಯಾಗಿ, ಸ್ನಾತಕೋತ್ತರ ಪದವಿ (ಮಾಸ್ಟರ್ ಡಿಗ್ರಿ) ಹೊಂದಿದವರಿಗೆ ಹಾಗೂ ಡಿಪ್ಲೋಮಾ ಇನ್ ಬ್ಯಾಂಕಿಂಗ್/ ಡಿಪ್ಲೋಮಾ ಇನ್ ಕೋಒಪರೇಟಿವ್ ಬಿಸಿನೆಸ್ ಮ್ಯಾನೇಜ್ಮೆಂಟ್/ ಜೆ.ಎ.ಐ.ಐ.ಬಿ/ ಸಿ.ಎ.ಐ.ಐ.ಬಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

   ಅಭ್ಯರ್ಥಿಗಳು ಕನ್ನಡ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ಓದುವ, ಬರೆಯುವ, ಮಾತನಾಡುವ ಹಾಗೂ ವ್ಯವಹಾರದ ಜ್ಞಾನ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಂಪ್ಯೂಟರ್ ಶಿಕ್ಷಣ ಹೊಂದಿರಬೇಕು.

   ಬ) **ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ (Attender/ Peon / Security Guard) ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು:**

   ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.

2. ಅರ್ಜಿಯನ್ನು ಸ್ವ – ಹಸ್ತಾಕ್ಷರದಲ್ಲಿ ಬರೆಯತಕ್ಕದ್ದು. ತಪ್ಪು ಹಾಗೂ ಅಪೂರ್ಣ ಮಾಹಿತಿ ನೀಡಿದ ಅರ್ಜಿಯನ್ನು ತಿರಸ್ಕರಿಸಲಾಗುವುದು.

3. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಹೆಸರನ್ನು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿಯಲ್ಲಿದ್ದಂತೆ ಸ್ಪಷ್ಟವಾಗಿ ದಪ್ಪ ಅಕ್ಷರದಲ್ಲಿ ಬರೆಯಬೇಕು.

4. ಅಂಚೆ ವಿಳಾಸದ ಕಾಲಂನಲ್ಲಿ ಮನೆ ನಂಬರ್, ಬೀದಿ, ಅಡ್ಡರಸ್ತೆ, ಅಂಚೆ, ತಾಲೂಕು ಹಾಗೂ ಪಿನ್‌ಕೋಡ್ ಹಾಗೂ ಮೊಬೈಲ್ ಸಂಖ್ಯೆ ಹಾಗೂ ಇ–ಮೇಲ್ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

5. ತಂದೆ / ತಾಯಿ / ಪೋಷಕರು ಇವರಲ್ಲಿ ಅನ್ವಯಿಸುವುದನ್ನು ಗುರುತು ಮಾಡಬೇಕು.

6. ಜನ್ಮ ದಿನಾಂಕದ ಬಗ್ಗೆ ಸ್ವದೃಢೀಕರಿಸಿದ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿಯನ್ನು ಲಗತ್ತಿಸಬೇಕು.

7. ಅ. **ಇತ್ತೀಚಿನ ಬಣ್ಣದ ಪಾಸ ಪೋರ್ಟ ಅಳತೆಯ ಒಂದು ಭಾವಚಿತ್ರವನ್ನು ಅಂಟಿಸಬೇಕು, ಸ್ಟೆಪಲ್ ಮಾಡಬಾರದು ಹಾಗೂ ಭಾವಚಿತ್ರದ ಹಿಂಭಾಗದಲ್ಲಿ ಅಭ್ಯರ್ಥಿ ಸಹಿ ಮಾಡಿರುವ ನಾಲ್ಕು ಪ್ರತಿಯನ್ನು ಲಗತ್ತಿಸಬೇಕು.**

ಬ. ಎಸ್.ಎಸ್.ಎಲ್.ಸಿ / ಪಿ.ಯು.ಸಿ / ಪದವಿ / ಸ್ನಾತಕೋತ್ತರ ಪದವಿಯ ಎಲ್ಲಾ ವರ್ಷಗಳ / ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಯ ಸ್ವದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸಬೇಕು.

ಕ. ಪದವಿಯ ಎಲ್ಲಾ ವರ್ಷಗಳ ಎಗ್ರಿಗೇಟ್ ಸರಾಸರಿಯನ್ನು ಶೇಕಡಾ ಅಂಕದ ಕಾಲಂನಲ್ಲಿ ನಮೂದಿಸಬೇಕು.

ಡ. ಈ ಮೇಲ್ಕಾಣಿಸಿದ ಹುದ್ದೆಗೆ ಸಂಬಂಧಪಟ್ಟ ಸೇವಾ ಅನುಭವ ಇದ್ದಲ್ಲಿ ದೃಢೀಕರಣ ಪತ್ರವನ್ನು ಲಗತ್ತಿಸತಕ್ಕದ್ದು.

ಇ. ಉತ್ತಮ ನಡತೆ ಹಾಗೂ ಕೌಟಂಬಿಕ ಹಿನ್ನೆಲೆ ಹೊಂದಿರುವ ಕುರಿತು ಅಭ್ಯರ್ಥಿಯು ವ್ಯಾಸಂಗ ಮಾಡಿದ ಶಾಲಾ / ಕಾಲೇಜಿನ ಮುಖ್ಯಸ್ಥರನ್ನು ಹೊರತುಪಡಿಸಿ ಹಾಗೂ ಅಭ್ಯರ್ಥಿಯ ಸಂಬಂಧಿಗಳನ್ನು ಹೊರತುಪಡಿಸಿ ಇಬ್ಬರು ಗಣ್ಯರಿಂದ ಪೂರ್ತಿ ವಿಳಾಸ, ಉದ್ಯೋಗ ವಿವರದೊಂದಿಗೆ ನಡತೆ ಪ್ರಮಾಣ ಪತ್ರ ಪಡೆದು ಲಗತ್ತ ಇಡಬೇಕು.

ಎಫ್ ಕಂಪ್ಯೂಟರ್ ಶಿಕ್ಷಣ ತರಬೇತಿಯನ್ನು ಪೂರೈಸಿದ ಅಭ್ಯರ್ಥಿಗಳು ತರಬೇತಿ ಪ್ರಮಾಣ ಪತ್ರಗಳ ಸ್ವದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.

8. ಅರ್ಜಿಯೊಂದಿಗೆ ಯಾವುದೇ ಮೂಲ ಪ್ರಮಾಣ ಪತ್ರವನ್ನು ಲಗತ್ತಿಸಬಾರದು. ಲಗತ್ತಿಸಿದ ಪ್ರಮಾಣ ಪತ್ರಗಳ ನಕಲುಗಳನ್ನು ಸ್ವದೃಢೀಕರಿಸಬೇಕು. ಎಲ್ಲಾ ಅವಶ್ಯಕ ದಾಖಲು ಪತ್ರಗಳನ್ನು ಪೂರೈಸದಿದ್ದಲ್ಲಿ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

9. ಲಿಖಿತ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕರೆ ಪತ್ರ (ಕಾಲ್ ಲೆಟರ್) ಹಾಗೂ ಗುರುತಿನ ಚೀಟಿಯೊಂದಿಗೆ ಪರೀಕ್ಷೆಗೆ ಹಾಜರಾಗಬೇಕು.

10. ಈ ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳಿಗೆ_ಅರ್ಜಿ ಸಲ್ಲಿಸುವ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನ ನಡೆಸುವ ಮೂಲಕ ಆಯ್ಕೆ ಮಾಡಲಾಗುವುದು.

**ಅ) ಫ್ರಂಟ ಡೆಸ್ಕ ಅಸೋಸಿಯೇಟ (Front Desk Associate) / ಕಸ್ಟಮರ್ ರಿಲೇಷನಶಿಪ ಅಸೋಸಿಯೇಟ (Customer Relationship Associate) ಹುದ್ದೆಗೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ 200 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಈ ಪೈಕಿ ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಇಂಗ್ಲೀಷ್‌ಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಕ್ಕೆ 50 ಅಂಕಗಳು ಮತ್ತು ಭಾರತ ಸಂವಿಧಾನಕ್ಕಾಗಿ 25 ಅಂಕಗಳು, ಬ್ಯಾಂಕಿನ ಉದ್ದೇಶಗಳು ಮತ್ತು ಕಾರ್ಯಚಟುವಟಿಕೆಗಳಿಗೆ 25 ಅಂಕಗಳು = ಒಟ್ಟೂ 200 ಅಂಕಗಳಿಗೆ ಬಹು ಆಯ್ಕೆಮಾದರಿಯ (Objective type Multiple choice) ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

**ಬ) ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ (Attender/ Peon / Security Guard) ಹುದ್ದೆಗೆ** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ 100 ಅಂಕಗಳ ಲಿಖಿತ ಪರೀಕ್ಷೆ ಇದ್ದು, ಈ ಪೈಕಿ ಕನ್ನಡ ಭಾಷೆಗಾಗಿ 50 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 50 ಅಂಕಗಳು = ಒಟ್ಟೂ 100 ಅಂಕಗಳಿಗೆ ಬಹು ಆಯ್ಕೆಮಾದರಿಯ (Objective type Multiple choice) ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

ಈ ಮೇಲ್ಕಾಣಿಸಿದ ಎಲ್ಲಾ ಹುದ್ದೆಗಳಿಗೆ_ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಪಡೆಯುವ ಅಂಕಗಳನ್ನು ಶೇಕಡಾ 85 ಕ್ಕೆ ನಿಗದಿಪಡಿಸಿ, ಉಳಿದ ಪ್ರತಿಶತ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 1:5 ಅನುಪಾತದಲ್ಲಿ ಮೌಖಿಕ ಸಂದರ್ಶನ ನಡೆಸಿ, ಆಯ್ಕೆ ಮಾಡಲಾಗುವುದು.

11. **ಫ್ರಂಟ ಡೆಸ್ಕ ಅಸೋಸಿಯೇಟ (Front Desk Associate) / ಕಸ್ಟಮರ್ ರಿಲೇಷನಶಿಪ ಅಸೋಸಿಯೇಟ** (Customer Relationship Associate) ಅಥವಾ **ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ (Attender/ Peon / Security Guard)** ಹುದ್ದೆಗಳಿಗೆ

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು **ರೂ.1000/– (ರೂಪಾಯಿ ಒಂದು ಸಾವಿರ ಮಾತ್ರ)** ರ ಡಿಮಾಂಡ್ ಡ್ರಾಫ್ಟ್‌ನ್ನು **"Chief Executive Officer, The Sirsi Urban Sahakari Bank Ltd., Sirsi"** ಹೆಸರಿಗೆ ತೆಗೆದು ಅರ್ಜಿಯೊಂದಿಗೆ ಲಗತ್ತಿಸಿಬೇಕು. ನಗದು, ಮನಿಆರ್ಡರ್, ಎನ್‌ಇಎಫ್‌ಟಿ, ಪೋಸ್ಟ್‌ಲ್ ಆರ್ಡರ್ ಇತ್ಯಾದಿಗಳನ್ನು ಸ್ವೀಕರಿಸಲಾಗುವುದಿಲ್ಲ. ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ ನಂತರ ಹಿಂದಿರುಗಿಸಲಾಗುವುದಿಲ್ಲ.

12. ಭರ್ತಿ ಮಾಡಿದ ಅರ್ಜಿಯನ್ನು ಮೊಹರಾದ ಲಕೋಟೆಯಲ್ಲಿ **"ಫ್ರಂಟ ಡೆಸ್ಕ ಅಸೋಸಿಯೇಟ (Front Desk Associate) / ಕಸ್ಟಮರ್ ರಿಲೇಷನಷಿಪ ಅಸೋಸಿಯೇಟ** (Customer Relationship Associate) **ಅಥವಾ ಸೇವಕ/ ಸಿಪಾಯಿ/ ಕಾವಲುಗಾರ/ ಭದ್ರತಾ ರಕ್ಷಕ (Attender/ Peon / Security Guard)** ಹುದ್ದೆಗೆ ಅರ್ಜಿ" ಅಂತಾ ಸ್ಪಷ್ಟವಾಗಿ ಲಕೋಟೆ ಮೇಲೆ ನಮೂದಿಸಿ ಡಿಮಾಂಡ್ ಡ್ರಾಫ್ಟ್ ಹಾಗೂ ಅಗತ್ಯ ದಾಖಲೆ / ಪ್ರಮಾಣ ಪತ್ರಗಳ ಸಹಿತ **"ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಕೇಂದ್ರ ಕಛೇರಿ, ಶಿರಸಿ, (ಉ.ಕ)–581 401"** ಈ ವಿಳಾಸಕ್ಕೆ **ಪತ್ರಿಕಾ** ಪ್ರಕಟಣೆಯ ದಿನಾಂಕದಿಂದ 21 ದಿನಗೊಳಗಾಗಿ **ತಲುಪುವಂತೆ** ಸಲ್ಲಿಸತಕ್ಕದ್ದು. ಭರ್ತಿ ಮಾಡಿದ ಅರ್ಜಿಗಳು ಬ್ಯಾಂಕಿನ ಕೇಂದ್ರ ಕಛೇರಿಗೆ ತಲುಪಬೇಕಾದ ಕೊನೆಯ ದಿನಾಂಕ **28–07–2026** ಆಗಿರುತ್ತದೆ. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಸಾರ್ವತ್ರಿಕ ರಜೆ ದಿನವಾಗಿದ್ದರೆ ಮುಂದಿನ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಒಂದೇ ಅಭ್ಯರ್ಥಿಯು ಈ ಮೇಲ್ಕಾಣಿಸಿದ ಎರಡೂ ಹುದ್ದೆಗಳಿಗೂ ಅರ್ಜಿ ಸಲ್ಲಿಸುವುದಿದ್ದಲ್ಲಿ, ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು, ಸೂಕ್ತ ಅರ್ಜಿ ಶುಲ್ಕದ ಜೊತೆಗೆ ಸಲ್ಲಿಸತಕ್ಕದ್ದು.

13. ಅರ್ಜಿಗೆ ಪೂರ್ಣ ಪ್ರಮಾಣದ ಸಹಿ ಮಾಡಬೇಕು. ಸಹಿ ಇಲ್ಲದ ಅಥವಾ ಪೂರ್ಣ ಪ್ರಮಾಣದ ಸಹಿ ಇಲ್ಲದ ಅರ್ಜಿಗಳನ್ನು ಪರಿಗಣಿಸಲು ಬರಲಾರದು. ಬ್ಯಾಂಕು ಪೂರೈಸುವ ಅರ್ಜಿ ಫಾರ್ಮನ್ನೇ ಪಡೆದು ಅರ್ಜಿ ಸಲ್ಲಿಸಬೇಕು. ಇದರ ಝೆರಾಕ್ಸ ಪ್ರತಿ, ಟೈಪ್ ಮಾಡಿದ ಪ್ರತಿ ಅಥವಾ ಸ್ವ– ಹಸ್ತಾಕ್ಷರದಲ್ಲಿ ತಯಾರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**14.** ಅರ್ಜಿಯನ್ನು ಅಂಚೆ ಮೂಲಕ ಕಳುಹಿಸಲು ಸೂಚಿಸಿದೆ. ವೈಯಕ್ತಿಕವಾಗಿ ಬಂದು ನೀಡುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**15.** ಬ್ಯಾಂಕು ಅಭ್ಯರ್ಥಿತ್ವದ (**Candidature**) ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸುವುದಿಲ್ಲ.

**16.** ಅಭ್ಯರ್ಥಿಯು ಮಾನಸಿಕ ಮತ್ತು ದೈಹಿಕ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನು ಉಂಟುಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತವಾಗಿರಬೇಕು. ಯೋಗ್ಯ ಹಾಗೂ ಸೂಕ್ತವಾದ ಅಭ್ಯರ್ಥಿಗಳನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಸಿಬ್ಬಂದಿ ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.

–––––––––––––––